# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 572 |
| ಉತ್ತರಿಸಬೇಕಾದ ದಿನಾಂಕ | : | 11.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ಸರ್ಕಾರ ನೀಡಲಾಗುತ್ತಿರುವ ಪ್ರೋತ್ಸಾಹಧನದ ಮೊತ್ತವೆಷ್ಟು; | ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನ ಪಾವತಿ ಮಾಡಲಾಗುತ್ತಿದೆ. |
| ಆ) | ಬಾಕಿ ಪಾವತಿಸ ಬೇಕಾಗಿರುವ ಪ್ರೋತ್ಸಾಹ ಧನದ ಮೊತ್ತವೆಷ್ಟು; (ಒಕ್ಕೂಟ ವಾರು ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಮಾರ್ಚ್-2023 ರಿಂದ ಮೇ-2023ರ ವರೆಗೆ ಒಟ್ಟು 3 ತಿಂಗಳ ಪ್ರೋತ್ಸಾಹಧನ ಪಾವತಿಗೆ ಬಾಕಿ ಇರುತ್ತದೆ. (ಒಕ್ಕೂಟವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ)<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನವನ್ನು ಏಪ್ರಿಲ್-2023ರ ಮಾಹೆಯವರೆಗೆ ಪಾವತಿಸಲಾಗಿದ್ದು, ಮೇ-2023ರ ಮಾಹೆಯ ಪ್ರೋತ್ಸಾಹಧನ ಪಾವತಿಸಲು ಕ್ರಮವಿಡಲಾಗಿದೆ. |
| ಇ) | ಬಾಕಿ ಮೊತ್ತ ಬಿಡುಗಡೆಗೆ ವಿಳಂಬ ಉಂಟಾಗಲು ಕಾರಣಗಳೇನು; | 2022-23ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಸಕಾಲದಲ್ಲಿ ಅನುದಾನವು ಬಿಡುಗಡೆಯಾಗದಿದ್ದರಿಂದ ನವೆಂಬರ್-2022 ರಿಂದ ಫೆಬ್ರುವರಿ-2023 ರವರೆಗೆ ಪಾವತಿಗೆ ಬಾಕಿ ಇದ್ದ ಪ್ರೋತ್ಸಾಹಧನದ ಮೊತ್ತವನ್ನು 2023-24ನೇ ಸಾಲಿನಲ್ಲಿ ಬಿಡುಗಡೆಯಾದ ಮೊದಲನೇ ಕಂತಿನ ರೂ.356.00 ಕೋಟಿಗಳ ಅನುದಾನದಲ್ಲಿ ಪಾವತಿಸಲಾಗಿರುತ್ತದೆ.<br><br>2023-24ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಮಾರ್ಚ್-2023 ರಿಂದ ಮೇ-2023ರ ಮಾಹೆಯವರೆಗಿನ ಪಾವತಿ ಮಾಡಬೇಕಾದ ಬಾಕಿ ಪ್ರೋತ್ಸಾಹಧನವನ್ನು ಆರ್ಥಿಕ ಇಲಾಖೆಯಿಂದ ಒದಗಿಸಿದ ತಕ್ಷಣವೇ ಅನುದಾನ ಬಿಡುಗಡೆಗೊಳಿಸಿ ಪಾವತಿಸಲಾಗುವುದು. |
| ಈ) | ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು? | 2023-24ನೇ ಸಾಲಿನ 2ನೇ ಕಂತಿನ ಅನುದಾನ ಆರ್ಥಿಕ ಇಲಾಖೆಯಿಂದ ಬಿಡುಗಡೆಗೊಳಿಸಿದ ತಕ್ಷಣ ಪಾವತಿಸಲಾಗುವುದು. |

**ಇ- ಪಸಂಮೀ 125 ಸಲೆವಿ 2023**

(ಕೆ. ವೆಂಕಟೇಶ್)

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 572 ಕ್ಕೆ ಅನುಬಂಧ –ಒಕ್ಕೂಟವಾರು ಪಾವತಿಗೆ ಬಾಕಿಯಿರುವ ಪ್ರೋತ್ಸಾಹಧನದ ವಿವರ

(ರೂ.ಗಳಲ್ಲಿ)

| ಕ್ರ.ಸಂ | ಒಕ್ಕೂಟಗಳು. | 100(ಸಾಮಾನ್ಯ) | | | |
|---|---|---|---|---|---|
| | | ಮಾರ್ಚ್-23 | ಏಪ್ರಿಲ್-23 | ಮೇ-23 | ಒಟ್ಟು |
| 1 | ವಿಜಯಪುರ | 20966597 | 19697768 | 19966821 | 60631186 |
| 2 | ಬಳ್ಳಾರಿ | 19913782 | 20599102 | 21526051 | 62038935 |
| 3 | ಬೆಳಗಾವಿ | 22473166 | 20321151 | 20651972 | 63446289 |
| 4 | ಬೆಂಗಳೂರು | 166645444 | 163336622 | 190509874 | 520491940 |
| 5 | ಚಾಮರಾಜನಗರ | 21430687 | 21237194 | 25897297 | 68565178 |
| 6 | ಕೋಲಾರ | 84667168 | 92959069 | 101959478 | 279585715 |
| 7 | ಕಲಬುರಗಿ | 5426332 | 5030610 | 5278200 | 15735142 |
| 8 | ಶಿವಮೊಗ್ಗ | 71502358 | 74025840 | 81733111 | 227261309 |
| 9 | ದಕ್ಷಿಣ ಕನ್ನಡ | 61329971 | 57807686 | 61228659 | 180366316 |
| 10 | ಧಾರವಾಡ | 15415616 | 14168723 | 14619575 | 44203914 |
| 11 | ಹಾವೇರಿ | 12588849 | 12307192 | 12754684 | 37650725 |
| 12 | ಹಾಸನ | 140094066 | 139001367 | 160818288 | 439913721 |
| 13 | ಮಂಡ್ಯ | 115417511 | 111844076 | 126997744 | 354259331 |
| 14 | ಮೈಸೂರು | 80851399 | 82656159 | 94088780 | 257596338 |
| 15 | ತುಮಕೂರು | 81668464 | 83998807 | 92477547 | 258144818 |
| | **ಒಟ್ಟು** | **920391410** | **918991366** | **1030508081** | **2869890857** |